# Lang I - Kannada

**Directions:** Attempt the MOCK EXAM and Verify Your Answers **(NOTE : Keep Visiting for Latest Updates)**

**ಈ ಗದ್ಯ ಭಾಗವನ್ನು ಓದಿಕೊಂಡು ಪ್ರಶ್ನೆ ಸಂಖ್ಯೆ 1 ರಿಂದ 3 ರಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಗುರುತಿಸಿ**

ಭರತ ವರ್ಷದ ಪೂರ್ವಾರ್ಜಿತ ಸಂಪತ್ತಿನಲ್ಲಿ ರಾಮಾಯಣದಂತೆ ಮಹಾಭಾರತವೂ ಬಹುಮುಖ್ಯವಾದ ಒಂದು ವಸ್ತು. ಇವುಗಳಲ್ಲಿ ಮಹಾಭಾರತದ ಸ್ಥಾನ ವಿಲಕ್ಷಣವಾದದ್ದು. ರಾಮಾಯಣ ಈಗಯೇನೋ ಒಂದು ಧರ್ಮಗ್ರಂಥ ಆಗಿದೆ ಆದರೆ ಅದು ಉದಿಸಿದಾಗ ಪ್ರಾಯಶಃ ಅದು ಕಾವ್ಯ ಮಾತ್ರ ಆಗಿದ್ದಿತು. ಕೃತಿ ಉನ್ನತ ತತ್ವಗಳನ್ನು ಉಪದೇಶಿಸಿದ ಕಾರಣದಿಂದಲೂ ಅದರ ನಾಯಕನು ಉನ್ನತ ಜೀವನದಿಂದ ಒಬ್ಬ ಅವತಾರಪುರುಷನೆಂದು ಪರಿಗಣಿತನಾದುದರಿಂದಲೂ ಗ್ರಂಥ ಕಾವ್ಯತ್ವದಿಂದ ಒಂದು ಮತಗ್ರಂಥದ ಸ್ಥಾನಕ್ಕೆ ಏರಿತು. ಏರಿತು ಅಥವಾ ಇಳಿಯಿತು ಏಕೆಂದರೆ ಮತಗ್ರಂಥವೆಂದು ಕೆಲವರು ಹೆಚ್ಚಿನ ಮರ್ಯಾದೆಯನ್ನು ಕೊಟ್ಟಂತೆ ಅದು ಗ್ರಂಥವೇ ಅಲ್ಲ ಎಂಬಂತೆ ಅನೇಕರು ಅದನ್ನು ಕಡೆಗಣಿಸಿದರು.

**1. ರಾಮಾಯಣ ಗ್ರಂಥವು**

ಎ) ಹಿಂದಿನವರು ಸಂಪಾದಿಸಿಕೊಟ್ಟದ್ದು
ಬಿ) ನಾವೇ ಸಂಪಾದಿಸಿಕೊಂಡದ್ದು
ಸಿ) ಆಕಸ್ಮಿಕವಾಗಿ ಹುಟ್ಟಿಬಂದಿದ್ದು
ಡಿ) ದೈವನಿರ್ಮಿತವಾದದ್ದು

**2. ರಾಮಾಯಣವು ಹುಟ್ಟಿಕೊಂಡಾಗ ಅದೊಂದು**

ಎ) ಧರ್ಮಗ್ರಂಥವಾಗಿತ್ತು
ಬಿ) ಸಾಹಿತ್ಯಕೃತಿಯಾಗಿತ್ತು
ಸಿ) ಮತಗ್ರಂಥವಾಗಿತ್ತು
ಡಿ) ವಿಶಿಷ್ಟಕೃತಿಯಾಗಿತ್ತು

**3. ರಾಮಾಯಣವು ಮತಗ್ರಂಥವೆಂದು**

ಎ) ಎಲ್ಲರ ಅಭಿಪ್ರಾಯ
ಬಿ) ಯಾರ ಅಭಿಪ್ರಾಯವು ಅಲ್ಲ
ಸಿ) ಕೆಲವರ ಅಭಿಪ್ರಾಯ
ಡಿ) ಬಹುಜನರ ಅಭಿಪ್ರಾಯ

**4. ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ ಪಡೆದ ಕೃತಿ**

ಎ) ಸಾವಿರ ನೆರಳು
ಬಿ) ಸಾವಿರಾರು ನದಿಗಳು
ಸಿ) ಸಾವಿರ ಮೆಟ್ಟಿಲು
ಡಿ) ಸಾವಿರ ಸಾಲುಗಳು

**5. ಗದ್ಯವೇ ಹೃದ್ಯ ಎಂದವರು**

ಎ) ಲಕ್ಷ್ಮೀನಾರಾಯಣ
ಬಿ) ಲಕ್ಷ್ಮೀಶ

A M K Resource World
One Site for all FREE Resources
www.amkresourceinfo.com

Subscribe Website by Clicking BELL ICON for Latest Updates

CLICK HERE & VISIT www.amkresourceinfo.com for Key Answers

ಸಿ) ಕೆಂಪುನಾರಾಯಣ
ಡಿ) ಗೌರೀಶ ಕಾಯ್ಕಿಣಿ

**6. ಕರ್ನಾಟಕದ ಮೊದಲ ರಾಷ್ಟ್ರಕವಿ**

ಎ) ಶಿವರಾಮ ಕಾರಂತ
ಸಿ) ಎಂ.ಗೋವಿಂದ ಪೈ
ಬಿ) ಕುವೆಂಪು
ಡಿ) ಜಿ.ಎಸ್. ಶಿವರುದ್ರಪ್ಪ

**7. ಕರ್ನಾಟಕ ರತ್ನ ಪ್ರಶಸ್ತಿ ಪಡೆದ ಮೊದಲಿಗರು**

ಎ) ಡಾ.ರಾಜ್‌ಕುಮಾರ್
ಸಿ) ಮಾಸ್ತಿ
ಬಿ) ಕುವೆಂಪು
ಡಿ) ಎಸ್. ನಿಜಲಿಂಗಪ್ಪ

**8. ಅಲ್ಲಮ ಬಾರಿಸುತ್ತಿದ್ದ ವಾದ್ಯ**

ಎ) ತಬಲ
ಸಿ) ಹಾರ್ಮೋನಿಯಂ
ಬಿ) ಮದ್ದಳೆ
ಡಿ) ಕಂಜರ

**9. ಸಾಥಿನ್ ಎಂದರೆ**

ಎ) ಅಧಿಕಾರಿ
ಸಿ) ರಾಜಕಾರಿಣಿ
ಬಿ) ಗ್ರಾಮಸೇವಕಿ
ಡಿ) ಶಿಕ್ಷಕಿ

**10. ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿ**

ಎ) ನಾದಲೀಲೆ
ಸಿ) ನಾಕು ತಂತಿ
ಬಿ) ನಿರಾಭರಣ ಸುಂದರಿ
ಡಿ) ಗರಿ

**11. ಸಾಮಾಜಿಕ ಸನ್ನಿವೇಶಗಳಲ್ಲಿ ಕೈಗೊಂಡ ಉದ್ದೇಶ ಪೂರ್ವಕ ಚಟುವಟಿಕೆಯನ್ನು ಕುರಿತು ಬೋಧನಾ ವಿಧಾನ -**

ಎ) ಪಠ್ಯಪುಸ್ತಕ ವಿಧಾನ
ಸಿ) ಮೇಲ್ವಿಚಾರಣಾ ಅಧ್ಯಯನ
ಬಿ) ನಾಟಕಾಭಿನಯ ವಿಧಾನ
ಡಿ) ಯೋಜನಾ ವಿಧಾನ

**12, ನಾಟಕಾಭಿನಯದ ಅನುಕೂಲಗಳು -**

ಎ) ಸ್ಮರಣಶಕ್ತಿ ಹೆಚ್ಚುತ್ತದೆ
ಸಿ) ಬರೆಯುವ ಅಭ್ಯಾಸ ಬೆಳೆಯುತ್ತದೆ
ಬಿ) ಓದುವ ಹವ್ಯಾಸ ಬೆಳೆಯುತ್ತದೆ
ಡಿ) ಹಣ ಸಂಪಾದನೆಯಾಗುತ್ತದೆ

**13. ಭಾಷಾ ಬೋಧನೆಯ ಉದ್ದೇಶಗಳಲ್ಲಿ ಇದು ಒಂದು -**

ಎ) ವಿಷಯ ಜ್ಞಾನದ ಗ್ರಹಿಕೆ
ಸಿ) ವಿದ್ಯಾರ್ಥಿ ವೇತನದ ಮಂಜೂರಾತಿ
ಬಿ) ಹಾಜರಿ ಉತ್ತಮ ಪಡಿಸುವುದು
ಡಿ) ಅಕ್ಷರ ದಾಸೋಹಕ್ಕಾಗಿ

A M K Resource World
One Site for all FREE Resources
www.amkresourceinfo.com

Subscribe Website by Clicking BELL ICON for Latest Updates

CLICK HERE & VISIT www.amkresourceinfo.com for Key Answers

**14. ರಾಧಾ ತುಂಬಾ ಸುಂದರವಾದ ಹುಡುಗಿ ಈ ವಾಕ್ಯದಲ್ಲಿ ಸುಂದರವಾದ ಎಂಬ ಶಬ್ದವು -**

ಎ) ಕ್ರಿಯಾಪದ
ಸಿ) ಗುಣವಾಚಕ
ಬಿ) ನಾಮಪದ
ಡಿ) ಕರ್ಮಪದ

**15. ಮಾತು ಬಲ್ಲವನಿಗೆ ಜಗಳವಿಲ್ಲ ಇದು ಯಾವ ಅಲಂಕಾರ -**

ಎ) ದೃಷ್ಟಾಂತ ಅಲಂಕಾರ
ಸಿ) ಯಮಕಾಲಂಕಾರ
ಬಿ) ರೂಪಕ ಅಲಂಕಾರ
ಡಿ) ಉತ್ಪ್ರೇಕ್ಷಾಲಂಕಾರ

**16. "ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ ಇದರ ಅರ್ಥ-**

ಎ) ದೇಶವೇ ಸ್ವರ್ಗ
ಬಿ) ನಮ್ಮ ಜನನಿಯೇ ಈ ದೇಶ
ಸಿ) ಜನನಿ ಹಾಗೂ ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲು
ಡಿ) ಸ್ವರ್ಗ ಎಂದರೆ ಭೂಮಿ

**17. ಭಾಷಾ ಬೋಧನೆಯ ಉದ್ದೇಶಗಳಲ್ಲಿ ಈ ಅಂಶವು ಸೇರಿದೆ -**

ಎ) ವಿಷಯ ಜ್ಞಾನದ ಗ್ರಹಿಕೆ
ಸಿ) ವಿದ್ಯಾರ್ಥಿ ವೇತನದ ಮಂಜೂರಾತಿ
ಬಿ) ಹಾಜರಿ ಉತ್ತಮಪಡಿಸುವುದು
ಡಿ) ಅಕ್ಷರ ದಾಸೋಹ

**18, ಕ್ರಿಯಾತ್ಮಕ ವ್ಯಾಕರಣ ಎಂದರೆ -**

ಎ) ವ್ಯಾಕರಣ ನಿಯಮಗಳನ್ನು ಪ್ರಾಯೋಗಿಕವಾಗಿ ತಿಳಿಯುವುದು
ಬಿ) ದೋಷವನ್ನು ಪತ್ತೆ ಹಚ್ಚುವುದು
ಸಿ) ಲಿಖಿತ ಭಾಷೆಯ ಅನುಕರಣೆಗಾಗಿ ಇರುವುದು
ಡಿ) ಕ್ರಿಯಾಪದವನ್ನು ಮತ್ತೆ ಮತ್ತೆ ಬಳಸುವುದು

**19, ಪಠ್ಯಪುಸ್ತಕದ ಆಂತರಿಕ ಲಕ್ಷಣಗಳಲ್ಲಿ ಇದು ಬಹಳ ಮುಖ್ಯ ಅಂಶ**

ಎ) ದಪ್ಪರಟ್ಟಿನಿಂದ ಕೂಡಿರಬೇಕು
ಸಿ) ಪ್ರಕಾಶಕರ ಹೆಸರಿರಬೇಕು
ಬಿ) ಬೆಲೆ ಮುದ್ರಿಸಿರಬೇಕು
ಡಿ) ವರ್ಣ ಚಿತ್ರಗಳಿಂದ ಕೂಡಿರಬೇಕು

**20. ಮುದ್ರಿತ ಸಂಪನ್ಮೂಲಗಳೆಂದರೆ -**

ಎ) ಪಠ್ಯಪುಸ್ತಕಗಳು
ಸಿ) ಸ್ಲೈಡುಗಳು
ಬಿ) ಚಲನಚಿತ್ರಗಳು
ಡಿ) ಧ್ವನಿ ಸುರುಳಿಗಳು

**21. ನಾಮಪದದ ಮೂಲರೂಪ**

ಎ) ಪ್ರತ್ಯಯ
ಸಿ) ಪ್ರಾತಿಪದಿಕ
ಬಿ) ಧಾತು
ಡಿ) ಪ್ರಕೃತಿ

A M K Resource World
One Site for all FREE Resources
www.amkresourceinfo.com

Subscribe Website by Clicking BELL ICON for Latest Updates

CLICK HERE & VISIT www.amkresourceinfo.com for Key Answers

**22. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳು**

ಎ) ಐವತ್ತೆರಡು | ಸಿ) ಐವತ್ತು

ಬಿ) ನಲವತ್ತೊಂಬತ್ತು | ಡಿ) ನಲವತ್ತೇಳು

**23, ಬಹುವ್ರೀಹಿ ಸಮಾಸಕ್ಕೆ ನಿದರ್ಶನ**

ಎ) ಮುಂಬಾಗಿಲು | ಸಿ) ಕೆಂದಾವರೆ

ಬಿ) ಅರಮನೆ | ಡಿ) ನಾಲೊಗ

**24. -ಅರು-ರು,-ಗಳು,- ಅಂದಿರು ಎಂಬುವು**

ಎ) ಕಾಲಸೂಚಕ ಪ್ರತ್ಯಯಗಳು | ಸಿ) ವಿಭಕ್ತಿ ಪ್ರತ್ಯಯಗಳು

ಬಿ) ಬಹುವಚನ ಪ್ರತ್ಯಯಗಳು | ಡಿ) ಲಿಂಗ ಪ್ರತ್ಯಯಗಳು

**25. ಬೇಸರ ಪದದ ಗ್ರಾಮ್ಯ (ಜನಪದ) ರೂಪ**

ಎ) ಬ್ಯಾಸರ | ಸಿ) ಬ್ಯಾಸುರ

ಬಿ) ಬ್ಯಾಸಿರ | ಡಿ) ಬ್ಯಾಸ್ರ

**26. ಕನ್ನಡದ ಮೊಟ್ಟಮೊದಲ ಅಲಂಕಾರ ಗ್ರಂಥ**

ಎ) ಕುವಲಯಾನಂದ | ಸಿ) ಕಾವ್ಯಾವಲೋಕನ

ಬಿ) ಕವಿರಾಜಮಾರ್ಗ. | ಡಿ) ರಸರತ್ನಾಕರ

**27. ಮೈಸೂರು ಮಲ್ಲಿಗೆ ಕಂಪು ಬೀರಿದ ಕವಿ**

ಎ) ಕೆ.ಎಸ್. ನರಸಿಂಹಸ್ವಾಮಿ | ಸಿ) ತೀ.ನಂ.ಶ್ರೀ.

ಬಿ) ಅ.ನ.ಕೃ. | ಡಿ) ಕುವೆಂಪು

**28, ಜುಳುಜುಳು, ಪಟಪಟ, ದಡದಡ ಎಂಬುವು**

ಎ) ಕೃದಂತಾವ್ಯಯಗಳು | ಸಿ) ಅನುಕರಣಾವ್ಯಯಗಳು

ಬಿ) ಕ್ರಿಯಾರ್ಥಕಾವ್ಯಯಗಳು | ಡಿ)ಅವಧಾರಣಾರ್ಥಕಾವ್ಯಯಗಳು

**ಈ ಗದ್ಯಭಾಗವನ್ನು ಓದಿಕೊಂಡು ಪ್ರಶ್ನೆ ಸಂಖ್ಯೆ 29 ಮತ್ತು 30 ಕ್ಕೆ ಸೂಕ್ತವಾದ ಉತ್ತರವನ್ನು ಗುರುತಿಸಿ**

ಬಾಪೂ ಹೇಳಿದರು ಯಾರನ್ನೂ ಸುಧಾರಿಸಲಾಗದು ಎಂದು ಹೇಳಿ ಸುಮ್ಮನಾಗಲಾಗದು ನಿರಂಕುಶನಾದರೂ ಅವನೇಕೆ ಹಾಗೆ ಮಾಡುತ್ತಾನೆ ಎಂದು ತಿಳಿದುಕೊಂಡು, ಸಮಯ ಸಂದರ್ಭಗಳನ್ನು ಪರಿಶೀಲಿಸಿ, ತಾಳ್ಮೆಯಿಂದ ಕರುಣೆಯಿಂದ ಅವನನ್ನು ನ್ಯಾಯಮಾರ್ಗಕ್ಕೆ ತರಲು ಸಾಧ್ಯವಾದಷ್ಟೂ ಪ್ರಯತ್ನಿಸಬೇಕು...

ಅವರಲ್ಲಿ ಕೆಲವರನ್ನಾದರೂ ಒಳ್ಳೆಯ ದಾರಿಗೆ ತಂದರೆ ಅದು ಸತ್ಯಕ್ಕೆ ಸಲ್ಲಿಸುವ ಗೌರವ, ಅಹಿಂಸೆಗೆ ಸಲ್ಲುವ ಗೌರವ.

A M K Resource World
One Site for all FREE Resources
www.amkresourceinfo.com

Subscribe Website by Clicking BELL ICON for Latest Updates

CLICK HERE & VISIT www.amkresourceinfo.com for Key Answers

ಯಾವುದೋ ಬಲವಂತಕ್ಕೆ ಸಿಕ್ಕಿ ಕೆಟ್ಟತನ ಒಳ್ಳೆಯತನದ ಸ್ಥಾನದಲ್ಲಿ ನಿಂತಿರುತ್ತದೆ ಅಷ್ಟೆ, ಅದಕ್ಕೆ ಅಂತಹವರನ್ನು ತೊರೆದು ಏಕಾಂಗಿಗಳನ್ನಾಗಿಯೂ ನಾವು ಮಾಡಬಾರದು. ಆಗ ಅಹಿಂಸೆಯ ಅಗ್ನಿಪರೀಕ್ಷೆ ಆಗುತ್ತದೆ. ಆಗಲಿ! ಮಾನವೀಯತೆಯ ದೃಷ್ಟಿಯಿಂದ ಅವನಿಗೆ ನಾನು ಆ ಕೆಟ್ಟತನದ ತೊಂದರೆಯಿಂದ ಅವನು ಹೊರಬರುವಂತೆ ಮಾಡಬೇಕು."

**29. ಬಾಪೂ ಅಭಿಪ್ರಾಯದಲ್ಲಿ ವ್ಯಕ್ತಿಯೊಬ್ಬ ನಿರಂಕುಶನಾದರೆ ಅವನನ್ನು**

ಎ) ನಿರ್ಲಕ್ಷಿಸಬೇಕು

ಬಿ) ಶಿಕ್ಷಿಸಬೇಕು

ಸಿ) ತಿದ್ದಲು ಪ್ರಯತ್ನಿಸಬೇಕು

ಡಿ) ವಿರೋಧಿಸಬೇಕು

**30. ಬಾಪೂ ಅವರ ಪ್ರಕಾರ ವ್ಯಕ್ತಿ**

ಎ) ಸ್ವಭಾವತಃ ಒಳ್ಳೆಯವನಲ್ಲ

ಬಿ) ಬಲವಂತಕ್ಕೆ ಸಿಕ್ಕಿ ಕೆಟ್ಟವನಾಗುತ್ತಾನೆ

ಸಿ) ಸುಧಾರಿಸಲು ಸಾಧ್ಯವಿಲ್ಲ

ಡಿ) ಹಿಂಸಾಪ್ರಿಯ

Key Answers of Today's (30th September 2020) Lang I - Kannada Practice Exam will be uploaded after 6pm In WEBSITE

A M K Resource World
One Site for all FREE Resources
www.amkresourceinfo.com

Visit
www.amkresourceinfo.com

Subscribe Website by Clicking BELL ICON for Latest Updates